ಓ.ಎಸ್. ನಂ. 70/2021
ಪಿ.ಡಬ್ಲ್ಯೂ: 01
(Harijana Sakamma)

ದಿನಾಂಕ: 12.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: ಪ್ರತಿವಾದಿ ಪರ – ಶ್ರೀ RR ವಕೀಲರಿಂದ.

4ನೇ ತರಗತಿಯವರೆಗೆ ಓದಿರುತ್ತೇನೆ. ಕೊಟ್ಟೂರು ನನ್ನ ಹುಟ್ಟೂರು. ನನ್ನ ಗಂಡನ ಊರು ಖಾನ ಮೊಡಗು. ಸಾಕ್ಷಿ ಮುಂದಮರೆದು ನಾವು ಮುದ್ದಾಪುರದಲ್ಲಿ ವಾಸಿಸುತ್ತೇವೆ. ಖಾನಾ ಮೊಡಗು ಗ್ರಾಮದಲ್ಲಿ ನಮ್ಮ ಹೊಲ ಮನೆ ಇದೆ. ನನಗೆ ಪ್ರತಿವಾದಿ ಬೂದಿ ಬಸಪ್ಪ ಅವರ ಕುಟುಂಬದ ಬಗ್ಗೆ ಮಾಹಿತಿ ಇಲ್ಲ. ಪ್ರತಿವಾದಿಯ ಅಜ್ಜ ಹರಿಜನರ ಹೊಟ್ಯೆಪ್ಪ ಎಂಬುವವರ ನನಗೆ ಗೊತ್ತು. ಸಾಕ್ಷಿ ಮುಂದುವರೆದು ಹೊಟ್ಯೆಪ್ಪ ನನ್ನ ಅಜ್ಜಿಯ ಗಂಡ. ಹೊಟ್ಯೆಪ್ಪನ ಹೆಂಡತಿ ಮಾರವ್ವ. ಅವರಿಗೆ ನಾನು ದತ್ತು ಮಗಳು ಅಲ್ಲ ಎಂದರೆ ಸರಿ. ನಾನು ಸ್ವಂತ ಮಗಳು ಸಹ ಅಲ್ಲ. ಸಾಕ್ಷಿ ಮುಂದುವರೆದು ಅಜ್ಜಿ ನನ್ನನ್ನು ಸಾಕಿರುತ್ತಾರೆ. ಅಜ್ಜಿ ನನ್ನನ್ನು ಸಾಕಿದ್ದರು ಎನ್ನುದರ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಯಾವ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಮರಣ ಶಾಸನವನ್ನು ಹಾಜರುಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ಪ್ರಮಾಣ ಪತ್ರ, ವಾದ ಪತ್ರ ಅಥವಾ ಮರಣ ಶಾತನದಲ್ಲಿ ಆ ಬಗ್ಗೆ ನಮೂದು ಇದೆಯಾ ಎಂದರೆ ಇಲ್ಲ. ಆದ ಕಾರಣ ನನಗೂ ಮಾರವ್ವ ಅಜ್ಜಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಅವರು ನನ್ನನ್ನು ಸಾಕಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಜ್ಜಿ ನನ್ನ ಅಪ್ಪನ ಅತ್ತೆಯಾಗಿರುತ್ತಾರೆ. ಆ ಬಗ್ಗೆ ಮರಣ ಪತ್ರದಲ್ಲಿ ಅಥವಾ ಎಲ್ಲಿಯಾದರು ನಮೂದು ಇದೆಯಾ ಎಂದರೆ ಇಲ್ಲ, ಆದರೆ ಅವರು ನನ್ನನ್ನು ಸಾಕಿರುತ್ತಾರೆ.

ಮಾರವ್ವ ನನ್ನ ತಂದೆಯ ಅತ್ತೆ ಎಂದು ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ಹೊಟ್ಯೆಪ್ಪನಿಗೆ ಮಲಿಯಪ್ಪ ಎನ್ನುವ ಅಣ್ಣ ಇದ್ದ ಎಂದರೆ ಸರಿ. ಆತನ ಮಕ್ಕಳು ಪ್ರತಿವಾದಿ ಹಾಗೂ ಓಬಣ್ಣ ಎಂದರೆ ನನಗೆ ಬಸಪ್ಪ ಮಾತ್ರ ಗೊತ್ತು. ನ್ಯಾಯಾಲಯದಲ್ಲಿ ಕುಳಿತಿರುವ ವ್ಯಕ್ತಿಯನ್ನು ತೋರಿಸಿ ಆತ ಓಬಣ್ಣ, ಆತ ಬಸಪ್ಪನ ತಮ್ಮ ಎಂದರೆ ಸರಿ. ದಾವೆ ಹೂಡುವ ಪೂರ್ವದಲ್ಲಿ ಆತ ಬಸಪ್ಪ ತಮ್ಮ ಎಂದು ಗೊತ್ತಿತ್ತು ಎಂದರೆ ಸರಿ. ಆತನನ್ನು ಈ ಪ್ರರಕಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ಬಸಪ್ಪ ಮತ್ತು ಓಬಣ್ಣ ಹೂಟ್ಯೆಪ್ಪನ ರಕ್ತ ಸಂಬಂಧಿಕರು ಎಂದರೆ ಹೌದು. ಹೂಟ್ಯೆಪ್ಪ ಹಾಗೂ ಅವರ ಅಣ್ಣ ಹಾಗೂ ಪ್ರತಿವಾದಿಗಳ ತಂದೆ ಒಟ್ಟು ಕುಟುಂಬದಲ್ಲಿ ಇದ್ದರೂ ಎಂದರೆ ಇಲ್ಲ, ಸಾಕ್ಷಿ ಮುಂದವರೆದು ಅವರು ಮದುವೆಯಾದ ನಂತರ ಎರಡು ವರ್ಷದ ನಂತರ ತವರು ಮನೆಗೆ ಬಂದಿರುತ್ತಾರೆ. ಹೂಟ್ಯೆಪ್ಪ, ಮಲಿಯಪ್ಪ, ಮಾರಮ್ಮರವರು ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಆಕೆಯ ಗಂಡ ಮೃತಪಟ್ಟ ನಂತರ ಆಕೆ ತವರು ಮನೆಗೆ ಬಂದಿರುತ್ತಾರೆ. ಅಲ್ಲಿ ಆಕೆ ಸ್ವಂತ ಆಸ್ತಿಯನ್ನು ಸಂಪಾದಿಸಿರುತ್ತಾರೆ. ನನಗೆ ಮಾರವ್ವ ಅಜ್ಜಿಯವರು ಮದುವೆಯಾದ 2 ವರ್ಷಗಳ ನಂತರ ಹೂಟ್ಯೆಪ್ಪರವರು ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ.

ಹೂಟ್ಯೆಪ್ಪರವರು ಮೃತ ಪಟ್ಟ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ನಾನು ಹೂಟ್ಯೆಪ್ಪ ಮಾರಮ್ಮರವರನ್ನು ಮದುವೆಯಾದ 2 ವರ್ಷಗಳ ನಂತರ ಹೂಟ್ಯೆಪ್ಪ ಮತಪಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆತ 2001 ನೇ ಇಸವಿಯ ನಂತರ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಯವರೆಗೂ ಆತ, ಮಾರಮ್ಮ ಮತ್ತು ಆತನ ಅಣ್ಣ ಒಟ್ಟು ಕುಟುಂಬದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಯಾರಾದರೂ ಮೃತಪಟ್ಟರೆ ಅವರ ರಕ್ತ ಸಂಬಂಧಿಕರೇ ತಿಥಿಯನ್ನು ಮಾಡುತ್ತಾರೆ ಎಂದರೆ ಸರಿ. ಆದರೆ ಮಾರಮ್ಮ ನಮ್ಮ ಊರಿನಲ್ಲಿ ಮೃತಪಟ್ಟಿರುವ ಕಾರಣ ನಾವೇ ತಿಥಿ ಮಾಡಿರುತ್ತೇವೆ. ಹೂಟ್ಯೆಪ್ಪ ಮತ್ತು ಆತನ ಪತ್ನಿ ತಿಥಿ ಕಾರ್ಯವನ್ನು ಪ್ರತಿವಾದಿಗಳೇ ಮಾಡಿರುತ್ತಾರೆ ಎಂದರೆ ನಾವೇ ಮಾಡಿರುತ್ತೇವೆ. ಮಾರವ್ವ ಸಾಯುವ ಕಾಲಕ್ಕೆ 70 ವರ್ಷ ವಯಸ್ಸು ಇತ್ತು. ಮರಣ ಶಾಸನ ಮಾಡುವ ಕಾಲಕ್ಕೆ ಅವರಿಗೆ ಎಷ್ಟು ವಯಸ್ಸು ಎಂದು ನನಗೆ ಗೊತ್ತಿಲ್ಲ. ನಾನು ಮಾರಮ್ಮ ಅಜ್ಜಿಯನ್ನು ನೋಡಿರುತ್ತೇನೆ. ಮಾರಮ್ಮ ಅಜ್ಜಿಗೆ ಆಗ ಅಂದಾಜು ಎಷ್ಟು ವಯಸ್ಸು ಇತ್ತು ಎಂದರೆ ನೀವೇ ಅಂದಾಜು ಮಾಡಬೇಕು.

ಸದರಿ ವಿಲ್ಲನ್ನು ಬರೆದಾಗ ನನಗೆ ಎಷ್ಟು ವಯಸ್ಸಾಗಿತ್ತು ಎಂದರೆ ನನಗೆ ಅಗ ಮದುವೆಯಾಗಿತ್ತು. ನನಗೆ ಎಷ್ಟು ವರ್ಷದಲ್ಲಿ ಮದುವೆಯಾಗಿತ್ತು ಎಂದರೆ ನನಗೆ 20 ವರ್ಷ ವಯಸ್ಸಿನಲ್ಲಿ ಮದುವೆಯಾಗಿತ್ತು. ನನಗೆ ಮದುವೆಯಾದ ನಂತರ ನನ್ನ ಗಂಡನ ಮನೆಗೆ ಹೋಗಿರುವುದಿಲ್ಲ. ನನಗೆ ಕಾಲು ಸರಿಯಿಲ್ಲದ ಕಾರಣ ನನ್ನ ಅಜ್ಜಿ ನನ್ನನ್ನು ಗಂಡನ ಮನೆಗೆ ಕಳುಹಿಸಿರುವುದಿಲ್ಲ. ಮರಣ ಶಾಸನ ಬರೆದ ಸಮಯದಲ್ಲಿ ನಾನು

ಮನೆಯಲ್ಲೇ ಇದ್ದೆ. ನನಗೆ ಅಜ್ಜಿ ಎಲ್ಲಾದರೂ ಹೋಗಿ ಬರಬೇಕಾದರು ತಿಳಿಸುತ್ತಿದ್ದರು ಎಂದರೆ ನನಗೆ ಒಂದೊಂದು ಬಾರಿ ಹೇಳುತ್ತಿದ್ದರು ಒಂದೊಂದು ಬಾರಿ ಹೇಳುತ್ತಿರಲಿಲ್ಲ. ಸಾಕ್ಷಿ ಮುಂದುವೆರದು ವಿಲ್ ಬರೆದಾಗ ನನಗೆ ಎಷ್ಟು ವಯಸ್ಸಿತ್ತು ಎಂದು ನನಗೆ ಗೊತ್ತಿಲ್ಲ.

ಸದರಿ ಮರಣ ಶಾಸನದಲ್ಲಿ ಯಾರು ಬರೆದಿದ್ದಾರೆ, ಏನು ಬರೆದಿದೆ ಎಂದು ಅವರು ನನಗೆ ವಿಲ್ ತಂದುಕೊಟ್ಟ ಮೇಲೆ ತಿಳಿದುಕೊಂಡಿರುತ್ತೇನೆ. ಅದನ್ನು ಕರಿಯಪ್ಪ ಎಂಬುವವರು ತಂದುಕೊಟ್ಟಿದ್ದು, ಅವರು ಈಗ ಜೀವಂತ ಇಲ್ಲ. ಅಜ್ಜಿ ಮೃತ ಪಟ್ಟ 12 ದಿನಕ್ಕೆ ಮರಣ ಶಾಸನವನ್ನು ತಂದುಕೊಟ್ಟಿರುತ್ತಾರೆ. ಅವರು ನಮ್ಮ ಜನಾಂಗದವರಲ್ಲ. ಮರಣ ಶಾಸನ ಬರೆದ ಬಗ್ಗೆ ನನಗೆ ಯಾವುದೇ ಮಾಹಿತಿ ತಿಳಿಸಿರಲಿಲ್ಲ. ಆ ರೀತಿ ಅಜ್ಜಿ ಬರೆದ ಮರಣ ಶಾಸನವನ್ನು ಕರಿಯಪ್ಪನವರು ತಂದುಕೊಟ್ಟರುತ್ತಾರೆ ಎಂದು ನಾನು ನನ್ನ ವಕೀಲರಿಗೆ ತಿಳಿಸಿರುವುದಿಲ್ಲ. ಮರಣ ಶಾಸನಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದವರು ಓಬಳಾಪುರದವರು. ವಿಲ್ ಬರೆಯುವ ಕಾಲಕ್ಕೆ ನಾನು ಅಜ್ಜಿಯ ಹಿಂದೆ ಹೋಗಿರುತ್ತೇನೆ ಎಂದರೆ ಇಲ್ಲ. ಅಜ್ಜಿ ಕಣ್ಣು ಕಾಣುತ್ತಿರಲಿಲ್ಲ, ನಡೆಯಲು ಬರುತ್ತಿರಲಿಲ್ಲ ಎಂದರೆ ಸುಳ್ಳು. ಅಜ್ಜಿಗೆ ಯಾವುದೇ ಲೋಕ ಜ್ಞಾನ ಇರಲಿಲ್ಲ ಹಾಗೂ ಅಜ್ಜಿಗೆ ಯಾವುದೇ ವಿಚಾರಗಳ ಬಗ್ಗೆ ಗೊತ್ತಾಗುತ್ತಿರಲಿಲ್ಲ ಹಾಗೂ ಆ ದಿನ ನಡೆಯುವ ಘಟನೆಯನ್ನು ಬಿಡಸಿ ಬಿಡಸಿ ಹೇಳಬೇಕಾಗುತ್ತಿತ್ತು ಎಂದರೆ ಸುಳ್ಳು.

ಕರಿಯಪ್ಪರವರು ಗ್ರಾಮ ಪಂಚಾಯತಿಯ ಸದಸ್ಯರಾಗಿರುತ್ತಾರೆ ಎಂದರೆ ಅವರು ಚುನಾವಣೆಯಲ್ಲಿ ನಿಂತು ಸೋತಿರುತ್ತಾರೆ. ಅವರು ಗ್ರಾಮದಲ್ಲಿ ಆಗುವ ಜಗಳದ ಬಗ್ಗೆ ಪಂಚಾಯತಿ ಮಾಡುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಅವರನ್ನು ಉಪಯೋಗಿಸಿಕೊಂಡು ಮರಣ ಶಾಸನವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮರಣ ಶಾಸನದಲ್ಲಿ ನಮಗೂ ಅವರಿಗೂ ಸಂಬಂಧದ ಇರುವ ಬಗ್ಗೆ ಅಥವಾ ಅವರ ಗಂಡನ ಬಗ್ಗೆ ಆಥವಾ ಅವರಿಗೆ ಆಸ್ತಿಗೆ ಹೇಗೆ ಬಂತು ಎಂಬುದರ ಬಗ್ಗೆ ಅಥವಾ ಅವರಿಗೆ ಅವರು ಯಾವ ಕಾರಣಕ್ಕೆ ಮರಣ ಶಾಸನ ಬರೆಯುತ್ತಿದ್ದಾರೆ ಎಂಬುದರ ಬಗ್ಗೆ ಮರಣ ಶಾಸನದಲ್ಲಿ ಬರೆದಿರುವುದಿಲ್ಲ.

ಓ.ಎಸ್. ನಂ. 70/2021

ಪಿ.ಡಬ್ಲ್ಯು: 01

(Harijana Sakamma)

ಮರಣ ಶಾಸನಕ್ಕೆ ಮಾರಮ್ಮರವರು ತಮ್ಮ ಚುನಾವಣಾ ಚೀಟಿ ಅಥವಾ ಅವರ ಗುರುತಿನ ಚೀಟಿಯನ್ನು ಅಂಟಿಸಿರುವುದಿಲ್ಲ ಎಂದರೆ ಆಯಮ್ಮ ಮನಸ್ಪೂರ್ವಕವಾಗಿ ಬರೆದಿಸಿರುತ್ತಾರೆ. ಮಾರಮ್ಮರವರೇ ಮರಣ ಶಾಸನವನ್ನು ಬರೆದಿದ್ದರೆ ಅವರ ಗಂಡ, ಸಹೋದರ, ಪ್ರತಿವಾದಿಗಳಿಂದ ತೊಂದರೆಯಾಗಬಾರದು ಎಂದು ಬರೆಯುತ್ತಿದ್ದರು ಆ ರೀತಿ ಬರೆಯದೇ ಇದ್ದ ಕಾರಣ ಸದರಿ ಮರಣ ಶಾಸನವನ್ನು ಮಾರಮ್ಮರವರು ಬರೆದಿರುವುದಿಲ್ಲ ಎಂದರೆ ಅವರೇ ಸ್ವಂತವಾಗಿ ಬರೆದಿರುತ್ತಾರೆ. ಮಾರಮ್ಮರವರಿಗೆ ಸಹೋದರ ಸಹೋದರಿಯರು ಇಲ್ಲ, ನಾನೇ ಸಾಕಿರುತ್ತೇನೆ. ಮಾರಮ್ಮರವರ ಸಹೋದರ ಸಹೋದರಿಯವರ ಮಕ್ಕಳು ಇದ್ದರು ಎಂದರೆ ಸರಿ. ಆದರೆ ನಾನೇ ಅವರನ್ನು ಸಾಕಿರುತ್ತೇನೆ. ಮಾರಮ್ಮನಿಗೆ ಓಬಳಾಪುರದಲ್ಲಿ ತವರು ಮನೆ, ತವರು ಮನೆ ಆಸ್ತಿ ಇತ್ತು ಎಂದರೆ ಸರಿ. ಅವರ ತವರು ಮನೆಯವರು ಈಗಲು ಓಬಳಾಪುರದಲ್ಲಿ ಇದ್ದಾರೆ ಎಂದರೆ ಸರಿ. ತವರು ಮನೆಯ ಆಸ್ತಿಯನ್ನು ಅವರ ತವರು ಮನೆಯವರು ಬೇಸಾಯ ಮಾಡುತ್ತಿದ್ದಾರೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.